726 (984) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಣ್ಣ ಕೆರೆಗಳಿವೆ ,

ಆ) ಅವುಗಳಲ್ಲಿ ಎಷ್ಟು ಎಕರೆಗಳ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ,

ಇ) ಒತ್ತುವರಿ ಮಾಡಿರುವವರ ಮೇಲೆ ಸರ್ಕಾರ ಕಾನೂನಿನ ಕ್ರಮ ಕೈಗೊಂಡಿರುವ ಪ್ರಕರಣಗಳು ಯಾವುವು , (ಪ್ರಕರಣವಾರು ವಿವರ ನೀಡುವುದು) ,

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 3391 ಕೆರೆಗಳಿವೆ

ಆ) ಸರ್ವೆ ಕಾರ್ಯದಿಂದ ಒತ್ತುವರಿಯನ್ನು ಗುರುತಿಸಬೇಕಾಗಿದ್ದು, ಸಿಬ್ಬಂದಿ ಕೊರತೆಯಿಂದಾಗಿ ಹಂತ ಹಂತವಾಗಿ ಈ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಈಗಾಗಲೇ ಕೈಗೊಂಡಿರುವ ಸರ್ವೆ ಕಾರ್ಯದಂತೆ 426 ಕೆರೆಗಳಲ್ಲಿ ಒಟ್ಟಾರೆ 3475 31 ಎಕರೆ ವಿಸ್ತೀರ್ಣ ಒತ್ತುವರಿಗೆ ಒಳಪಟ್ಟಿದೆ ಇದಲ್ಲದೆ, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಲ ಸಂವರ್ಧನೆ ಯೋಜನಾ ಸಂಘದ ವತಿಯಿಂದ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತಿರುವ ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್‌ನ ಒಟ್ಟು 2015 ಕೆರೆಗಳಲ್ಲಿ 1253 ಕೆರೆಗಳ ಸರ್ವೆ ಕಾರ್ಯ ಮಾಡಿದ್ದು, ಈ ಕೆರೆಗಳಲ್ಲಿ ಒಟ್ಟಾರೆ 2470 ಎಕರೆ ಜಮೀನು ಒತ್ತುವರಿಯಾಗಿರುತ್ತದೆ

ಇ) ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲ ಹೀಗಿದ್ದೂ, ಮೇಲೆ ತಿಳಿಸಿದ ಒತ್ತುವರಿಯಲ್ಲಿ 3388 39 ಎಕರೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆ

727 (985) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಎಷ್ಟು ನೀರಾವರಿ ಯೋಜನೆಗಳನ್ನು ಸರ್ಕಾರ ಪೂರ್ಣಗೊಳಿಸಲಾಗಿದೆ ,

ಆ) ಇದಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ ಮತ್ತು ಖರ್ಚು ಮಾಡಲಾಗಿದೆ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) 2006–07ನೇ ಸಾಲಿನಲ್ಲಿ ಒಟ್ಟು 165 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ

ಆ) ಸಣ್ಣ ನೀರಾವರಿ ಇಲಾಖೆಗೆ 2006–07ನೇ ಸಾಲಿಗಾಗಿ ಯೋಜನೆ ಲೆಕ್ಕ ಶೀರ್ಷಿಕೆ ಅಡಿ ರೂ 57818 33 ಲಕ್ಷಗಳ ಅನುದಾನ ಒದಗಿಸಲಾಗಿದ್ದು,